ಮಹೇಶ್ ಸಣ್ಣಗಿರಿ, ಕೊಟ್ಟೂರು
*ರಾಜಕಾರಣಿಗಳ ಹಿಂದೆ ಓಡಾಡುವ ಚೇಲಾಗಳಿಗೂ, ತಿನ್ನುವ ಚಮಚಗಳಿಗೂ ಏನಾದರೂ ವ್ಯತ್ಯಾಸವಿದೆಯೆ ರಾಮಣ್ಣ?*



ಎರಡೂ ಎಂಜಲುಜೀವಿಗಳೇ ಆದರೂ ಚಮಚಗಳು ಆಗಾಗ್ಗೆ ಶುಭ್ರವಾಗುತ್ತವೆ, ಚೇಲಾಗಳು – ಊಹೂಂ!

ಬೇಲೂರು ನಾಗೇಶ್, ಹಾಸನ
*80ರ ಹರೆಯದ ನನ್ನಮ್ಮನನ್ನು ನನಗಿಂತಲೂ ಚೆನ್ನಾಗಿ ನೋಡಿಕೊಳ್ಳುವ ನನ್ನ ಪತ್ನಿಯ ಋಣವನ್ನು ಹೇಗೆ ತೀರಿಸಲಿ?*
ಅಂತಹ ಮಮತಾಸಾಗರಕ್ಕೆ ನೋವಾಗದಂತೆ ನಡೆದುಕೊಂಡು!

ಎನ್.ಎಸ್. ಆನಂದ್, ಕತ್ತರಗುಪ್ಪ
*ತಿಳಿಯದೆ ಸೇವಿಸುವುದಕ್ಕೂ, ಓದದೇ ರುಜು ಹಾಕುವುದಕ್ಕೂ ವ್ಯತ್ಯಾಸ ಉಂಟೆ ಸ್ವಾಮಿ?*
ಖಂಡಿತ. ಮೊದಲನೆಯದರಿಂದ ವೈದ್ಯನಿಗೆ ಲಾಭ, ಎರಡನೆಯದರಿಂದ ವಕೀಲನಿಗೆ!

ಆರ್.ಮಧುಸೂದನ್, ಹಾಸನ
*ಮನೆಯೊಳಗೆ ಪಕ್ಷಿ ಸಾಕಬೇಕೆಂಬ ಆಸೆ; ಕಾಗೆ ಸಾಕಲೋ, ಗೂಬೆ ಸಾಕಲೋ?*



ಹಂಚಿತಿನ್ನುವ ಕಾಗೆಯನ್ನು ನೀವು ಸಾಕಿ; ಗೂಬೆಯನ್ನು ನಿಮ್ಮ ಮನೆಯವರು ಸಾಕುತ್ತಿದ್ದಾರಂತಲ್ಲಾ...!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ತಂದೆ, ತಾಯಿ ದೇವರಿಗೆ ಸಮಾನ; ಹೆಂಡತಿ, ಮಕ್ಕಳು?*
ಮುಂದೆ ಅವರೂ ಅದೇ ಆಗುವುದರಿಂದ ಅಪ್ರೆಂಟೈಸ್ ದೇವತೆಗಳು!

ಸೋಮಶೇಖರ್, ಮೈಸೂರು
*ಹೆಣ್ಣನ್ನು ಭೂತಾಯಿ ಎನ್ನುತ್ತಾರೆ. ಗಂಡನ್ನು?*
ಭೂಗತ!

ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ
*ನಾವು, ಲೇಖನಿ ಸನ್ಯಾಸ ಹಿಡಿದರೆ ನಿಮಗೆ ಸಂಪತ್ತೋ, ವಿಪತ್ತೋ?*
ಅಸಲಿಗೆ ನೀವು ಸನ್ಯಾಸ ಹಿಡಿಯುವಂತೆಯೇ ಇಲ್ಲ; ಕೊಳ್ಳೆನ್ನೇವಾಧಿಕಾರಸ್ತೇ ಮಾ ಪೆನ್ ಸ್ಟ್ರೈಕು ಕದಾಚನ!

ಪಿ. ಹೇಮಂತಕುಮಾರ್, ಬೆಂಗಳೂರು
*ನನ್ನವಳ ನಡಿಗೆಯೇ ನರ್ತನದಂತಿದೆಯಲ್ಲಾ..?*
ಪಾದರಕ್ಷೆಯಲ್ಲಿ ಕಲ್ಲು ಸೇರಿರಬೇಕು, ತೆಗೆಯಿರಿ, ಸರಿಹೋಗುತ್ತದೆ!

ಎಚ್.ಜಿ. ಜಗದೀಶ್, ಮೈಸೂರು
*ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಟ್ಟೂ ಕೊಟ್ಟೂ ನಿಮಗೆ ಸುಸ್ತಾಗಲ್ವಾ?*
ಉಸಿರಾಟದಷ್ಟೇ ಸಹಜವಾದ ಯಾವ ಕೆಲಸಗಳೂ ಸುಸ್ತು ಉಂಟುಮಾಡುವುದಿಲ್ಲ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ವರನಟ ಡಾ. ರಾಜ್ ಕಾಲದ ಚಿತ್ರಗಳಿಗೂ, ಅವರ ಮಕ್ಕಳ ಕಾಲದ ಚಿತ್ರಗಳಿಗೂ ಏನು ವ್ಯತ್ಯಾಸ ರಾಂ?*
ಆ ಕಾಲದ್ದು ಬ್ಯಾಡರ ಕಣ್ಣಪ್ಪ; ಈ ಕಾಲದ್ದು – ಬ್ಯಾಡ ಕಣ್ರಪ್ಪ!

ಕೆ.ಪಿ. ಸುಜ್ಞಾನಚಾರಿ, ಚಿಕ್ಕತಿರುಪತಿ
*ಹಳ್ಳಿಗಳ ಕಡೆ ಹುಟ್ಟಿದ ಮಕ್ಕಳಿಗೆ ಹುಲಿಯ ಅಥವಾ ಆನೆಯ ಹಾಲಿನ ಬದಲು ಕತ್ತೆಯ ಹಾಲು ಕುಡಿಸುವುದೇಕೆ?*
ಮುಂದೆ ಏನೇ ಆಗದಿದ್ದರೂ ಕತ್ತೆಯಂತೆ ಚಾಕರಿ ಮಾಡಲಾದರೂ ತಾಕತ್ತಿರಲೆಂದು!

ನವಿರವಿ, ಬಾಳೆಹೊನ್ನೂರು
*ಗಂಡನ ಇನ್ನೊಂದು ಹೆಂಡತಿಗೆ ಸವತಿ ಎನ್ನುತ್ತೇವೆ. ಹೆಂಡತಿಯ ಇನ್ನೊಂದು ಗಂಡನಿಗೆ ಏನೆನ್ನಬೇಕು?*
ಹಂಗಾಮಿ ಹಸ್ಬೆಂಡ್!

ಕೆ. ಮೈಥಿಲಿಕೃಷ್ಣ, ಬೆಂಗಳೂರು
*ನಾಯಿಗೂ, ನಾಯಕನಿಗೂ ಕಾಮನ್ ಆಗಿ ಇರುವುದು ಏನು? ಅನ್‌ಕಾಮನ್ ಆಗಿ ಇರುವುದು ಏನು?*
ಬಾಲ, ಸ್ವಾಮಿನಿಷ್ಠೆ!

## ಬಹುಮಾನಿತ ಪ್ರಶ್ನೆ

ಪಿ.ಜೆ. ರಾಘವೇಂದ್ರ, ಮೈಸೂರು
*ಖಡ್ಗಕ್ಕಿಂತ ಲೇಖನಿ ಹರಿತ ಎನ್ನುತ್ತಿದ್ದ ತೆಹಲ್ಕಾ ತೇಜ್‌ಪಾಲ್ ಈಗ ಪೆನ್‌ಗಿಂತ ಪೆಣ್ ಹರಿತ ಎನ್ನುತ್ತಿರುವುದೇಕೆ?*
ನೀರೆಗೆ ನಿಬ್‌ಬೆರಗಾಗಿಸುವ ಶಕ್ತಿ ಇದೆಯೆಂದು ಈಗ ತಾನೇ ತಿಳಿಯಿತಂತೆ!

ಡೈರಿ ವಿಶ್ವನಾಥ್, ಬೆಂಗಳೂರು
*ಬದುಕು ಎಂದರೇನು?*
ಬಲುಮೆಯ, ದುಡಿಮೆಯ ಕುಲುಮೆ!

ಶೋಭಾ ಎಂ.ಆರ್. ಮರ್ಕುಲಿ
*ಉಪ್ಪು ತಿಂದವರು ನೀರು ಕುಡಿಯಲೇಬೇಕು; ಸಕ್ಕರೆ ತಿಂದವರು?*
ಅವರೂ ನೀರನ್ನೇ ಕುಡಿಯಬೇಕು; ಕಾಫಿ, ಟೀ ಕುಡಿದರೆ ಕಹಿಯಾಗುತ್ತದಲ್ಲ!

ಕೆ.ವಿ.ಶಿವಕುಮಾರ್ ಕಾಳೀಹುಂಡಿ, ಮೈಸೂರು
*ರಾಜಕೀಯ ಸಮಸ್ಯೆಗಳು ಹೆಚ್ಚಾಗಿ ರೆಸಾರ್ಟುಗಳಲ್ಲೇ ಪರಿಹಾರವಾಗುವುದರ ಗುಟ್ಟೇನು?*



ಅಲ್ಲಿ ಕೇಸ್‌ಗೆ ಸೂಟ್ ಆಗುವಂತಹ ಸೂಟ್‌ಕೇಸ್ ಕೊಡಲಾಗುವುದಂತೆ.

ಎಂ.ಎಸ್.ಗುರುರಾಜ ಆಚಾರ್, ಬಳ್ಳಾರಿ
*ಬ್ರಹ್ಮ ಹಣೆಬರಹ ಬರೆಯುವ ಕಾಲಕ್ಕೆ ಲೇಖನಿಯಲ್ಲಿ ಇಂಕ್ ಮುಗಿದರೆ?*
ಆ ಬೊಂಬೆ ಶ್ರೀಸಾಮಾನ್ಯನಾಗಿ ಬಾಳುತ್ತದೆ!

ಹಾಡ್ಯ ಬಿ. ಜಯಾನಂದ, ಮೈಸೂರು
*ವೇದಾಂತಿ ಹೇಳಿದನು ಹೊನ್ನೆಲ್ಲ ಮಣ್ಣು; ಕವಿ ಹೇಳುವನು ಮಣ್ಣೆಲ್ಲ ಹೊನ್ನು. ನೀವು?*
ಕುದುರೆಬಾಲ ಹಿಡಿದರೆ ಹೊನ್ನು ಮಣ್ಣು; ಒಳ್ಳೆಯ ಜಾಗದಲ್ಲಿ ಸೈಟ್ ಇದ್ದರೆ ಮಣ್ಣು ಹೊನ್ನು!

■ ರಾಮ್